# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2692
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ
ಉತ್ತರಿಸುವ ದಿನಾಂಕ : 25-03-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಡಾ:ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಮಂಜೂರಾದ ಸಹಾಯಧನ ಮೊತ್ತ ಎಷ್ಟು; ಸದರಿ ಸಹಾಯಧನದ ಸಾಲದ ಹಣವು ಫಲಾನುಭವಿಗಳಿಗೆ ಸರಿಯಾದ ಸಮಯಕ್ಕೆ ತಲುಪುತ್ತಿದೆಯೇ; ಇಲ್ಲದಿದ್ದಲ್ಲಿ, ಬಡ ಪರಿಶಿಷ್ಟ ಜಾತಿ ಜನಾಂಗದವರು ತೊಂದರೆ ಅನುಭವಿಸಿದಂತಾಗುವುದಿಲ್ಲವೇ; ಇದಕ್ಕೆ ಕಾರಣರಾದ ಅಧಿಕಾರಿ/ನೌಕರರು ಅಥವಾ ಬ್ಯಾಂಕ್‌ಗಳ ಮೇಲೆ ಸರ್ಕಾರ ಯಾವ ಕ್ರಮಕೈಗೊಂಡಿದೆ; (ಮಾಹಿತಿ ನೀಡುವುದು) | ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕಳೆದ 03 ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ಮಂಜೂರಾದ ಅನುದಾನದ ವಿವರ ಕೆಳಕಂಡಂತಿದೆ (ರೂ.ಲಕ್ಷಗಳಲ್ಲಿ) (see table below) |
| ಆ) | ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಗ್ರಾಮ ಪಂಚಾಯತಿಗೊಂದು ವಸತಿ ಶಾಲೆ ತೆರೆಯುವ ಸರ್ಕಾರದ ಚಿಂತನೆ ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ 28 ಸರ್ಕಾರಿ ವಸತಿ ಶಾಲೆಗಳನ್ನು (01 ರಿಂದ 05ನೇ ತರಗತಿ) ನಿರ್ವಹಿಸಲಾಗುತ್ತಿದೆ.<br><br>ಸಂಘದ ವತಿಯಿಂದ ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ 205 (117-ಪ.ಜಾತಿ, 50-ಪ.ವರ್ಗ, 03-ಏಕಲವ್ಯ 35-ಹಿಂ.ವರ್ಗ) ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ |

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆಗಳ ವಿವರ | 2018-19 | 2019-20 | 2020-21 |
|---|---|---|---|---|
| 01 | ಸ್ವಯಂ ಉದ್ಯೋಗ ನೇರಸಾಲ ಯೋಜನೆ/ ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ | 5900.00 | - | 2500.00 |
| 02 | ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ | 1374.00 | 1338.00 | 800.00 |
| 03 | ಗಂಗಾ ಕಲ್ಯಾಣ ಯೋಜನೆ | 16600.00 | 0.00 | 2500.00 |
| 04 | ಭೂ ಒಡೆತನ ಯೋಜನೆ | 0.00 | 19763.00 | 4624.00 |
| 05 | ಸಮೃದ್ಧಿ ಯೋಜನೆ | 7900.00 | 950.00 | 0 |
| 06 | ಐರಾವತ ಯೋಜನೆ | 7875.00 | 2800.00 | 0 |
| 07 | ಉನ್ನತಿ | 400.00 | 900.00 | |
| | **ಒಟ್ಟು** | **40049.00** | **25751.00** | **10424.00** |

| | | |
|---|---|---|
| ಇ) | ಸದರಿ ವಸತಿ ಶಾಲೆಗಳಲ್ಲಿ ಗುಣಮಟ್ಟದ ಊಟ ಮತ್ತು ವಸತಿ ನೀಡಲಾಗುತ್ತಿದೆಯೇ: ವಿದ್ಯಾರ್ಥಿನಿಯರ ಸುರಕ್ಷತೆಗಾಗಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು) | ಆಯಾ ವಿಭಾಗದ ವಸತಿ ಶಾಲೆ/ಕಾಲೇಜುಗಳಿಗೆ ಅನ್ವಯವಾಗುವಂತೆ ಮೈನು ಚಾರ್ಟ್ ತಯಾರಿಸಿ ಅದರಂತೆ ಗುಣಮಟ್ಟದ ಊಟ ನೀಡಲಾಗುತ್ತಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.<br><br>ವಿದ್ಯಾರ್ಥಿನಿಯರ ಸುರಕ್ಷತೆಗಾಗಿ ಎಲ್ಲಾ ವಸತಿ ಶಾಲೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ವಸತಿ ಶಾಲೆಗಳಲ್ಲಿ ಸಲಹಾ ಪೆಟ್ಟಿಗೆಯನ್ನು ಇರಿಸಲಾಗಿದೆ. ಶಾಲಾ ನಿರ್ವಹಣಾ ಸಮಿತಿ ಹಾಗೂ ಮಕ್ಕಳ ರಕ್ಷಣಾ ಸಮಿತಿಗಳನ್ನು ರಚಿಸಲಾಗಿದೆ. ಸದರಿ ಸಮಿತಿಯಲ್ಲಿ ಶಾಲೆಯ ಮುಖ್ಯಸ್ಥರು ಅಧ್ಯಕ್ಷಕರು ಒಬ್ಬರು ಶಿಕ್ಷಕರು,03 ಪೋಷಕರಲ್ಲಿ ಒಬ್ಬ ಮಹಿಳೆ ಹಾಗೂ 8ನೇ ತರಗತಿ ಅಥವಾ ಅದಕ್ಕಿಂತ ಉನ್ನತ ತರಗತಿಗಳ 02 ಅಥವಾ ಹೆಚ್ಚಿನ ವಿದ್ಯಾರ್ಥಿಗಳು ಹಾಗೂ ಭದ್ರತಾ ಸಿಬ್ಬಂದಿ ಸಮಿತಿಯಲ್ಲಿರುತ್ತಾರೆ. ಶಿಕ್ಷಣ ಸಂಸ್ಥೆಯ ಮಕ್ಕಳ ಸಂರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯ ಅಭಿವೃದ್ಧಿಗಾಗಿ ಚಟುವಟಿಕೆಗಳನ್ನು ಸಂಯೋಜಿಸಿ ತರಬೇತಿ ನೀಡುತ್ತಾರೆ. ವಿದ್ಯಾರ್ಥಿನಿಯರ ಸ್ವಯಂ ರಕ್ಷಣೆಗಾಗಿ "ಓಬವ್ವ ಆತ್ಮ ರಕ್ಷಣಾ ಕಲೆ" ತರಬೇತಿ ಪ್ರಾರಂಭಿಸಲಾಗಿದೆ.<br><br>ಈ ಯೋಜನೆಯಡಿ ಸಮಾಜ ಕಲ್ಯಾಣ ಇಲಾಖೆಯ 257 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಒಟ್ಟು 30,000 ವಿದ್ಯಾರ್ಥಿನಿಯರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 629 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಒಟ್ಟು 50,000 ವಿದ್ಯಾರ್ಥಿನಿಯರು ಮತ್ತು ಸಂಘದ 818 ವಸತಿ ಶಾಲೆಗಳ ಒಟ್ಟು 1,02,000 ವಿದ್ಯಾರ್ಥಿಯರಿಗೆ ಆತ್ಮ ರಕ್ಷಣಾ ಕಲೆಗಳಾದ ಕರಾಟೆ/ಜೂಡೋ/ಟೆಕ್ವಾಂಡೋ ತರಬೇತಿ ಪ್ರಯೋಜನ ಪಡೆಯುತ್ತಿದ್ದಾರೆ. |

**ಸಂಖ್ಯೆ: ಸಕಇ 195 ಎಸ್‌ಡಿಸಿ 2022**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.